ಕನ್ನಡಪ್ರಭ
ಗುರುವಾರ 7.05.2026

ಗರಿಷ್ಠ 34°c | ಕನಿಷ್ಠ 23°c



ನವೀನ್ ಬಾಬು ಬಿಜೆಪಿ ತಾಲೂಕು ಉಪಾಧ್ಯಕ್ಷ

ತುರುವೇಕೆರೆ: ಭಾರತೀಯ ಜನತಾ ಪಕ್ಷದ ತಾಲೂಕು ಘಟಕದ ಉಪಾಧ್ಯಕ್ಷರಾಗಿ ಟಿ.ಎಂ.ನವೀನ್ ಬಾಬು ರವರನ್ನು ನೇಮಕ ಮಾಡಲಾಗಿದೆ. ಈ ಹಿಂದೆ ಪಟ್ಟಣ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಇವರನ್ನು ಈಗ ತಾಲೂಕು ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಈ ಹುದ್ದೆ ನೀಡಲು ಸಹಕರಿಸಿದ ಮಾಜಿ ಶಾಸಕ ಮಸಾಲಾ ಜಯರಾಮ್, ತಾಲೂಕು ಘಟಕದ ಅಧ್ಯಕ್ಷ ಪ್ರಕಾಶ್ ಹಾಗೂ ಜಿಲ್ಲೆ, ತಾಲೂಕಿನ ಎಲ್ಲಾ ಮುಖಂಡರಿಗೆ ನವೀನ್ ಬಾಬು ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಮತ್ತು ಹಿರಿಯ ಮಾರ್ಗದರ್ಶನದಲ್ಲಿ ಪಕ್ಷವನ್ನು ಸಂಘಟಿಸುವ ಕೆಲಸ ಮಾಡುವುದಾಗಿ ನವೀನಬಾಬು ತಿಳಿಸಿದ್ದಾರೆ.



ಶಿರಾ ತಾಲೂಕು ಬುಕ್ಕಾಪಟ್ಟಣದಲ್ಲಿ ಬಂಗಾರದ ಅಂಗಡಿ ಶೆಟರ್ಸ್ ಮುರಿದು ಅಂಗಡಿಯಲ್ಲಿದ್ದ ಬೆಳ್ಳಿ ಹಾಗೂ ಬಂಗಾರದ ಒಡವೆಗಳನ್ನು ಕಳ್ಳತನ ಮಾಡಿರುವ ಪ್ರಕರಣ ಬುಧವಾರ ಬೆಳ್ಳಂಬೆಳಗ್ಗೆ ನಡೆದಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಶಿರಾ ತಾಲೂಕು ಕಚೇರಿಯಲ್ಲಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಸಿ ಬಿ ಸುರೇಶ್ ಬಾಬು ರವರು ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳ ಉಪಸ್ಥಿತಿಯಲ್ಲಿ ಬುಕ್ಕಾಪಟ್ಟಣ ಹೋಬಳಿಯ ರೈತರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ 49ನೇ ವಾರದ ಜನಸಂಪರ್ಕ ಸಭೆ ನಡೆಸಿದರು.

ಸುದ್ದಿ ಸಿಂಚನ

ಬೀದಿ ನಾಯಿಗಳ ಹಾವಳಿ ನಿಯಂತ್ರಿಸಿ



ತಿಪಟೂರು: ನಗರದಾದ್ಯಂತ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಸಾರ್ವಜನಿಕರು, ವಿದ್ಯಾರ್ಥಿಗಳು, ವಾಹನ ಸವಾರರು ಹಾಗೂ ನಿವಾಸಿಗಳು ಪ್ರಾಣಭೀತಿಯಿಂದ ಓಡಾಡುವಂತಹ ಪರಿಸ್ಥಿತಿ ಎದುರಾಗಿದ್ದು ನಗರಸಭೆ ಬೀದಿನಾಯಿಗಳ ಹಾವಳಿ ತಪ್ಪಿಸಬೇಕೆಂದು ನಗರದ ನಾಗರೀಕರು ಒತ್ತಾಯಿಸಿದ್ದಾರೆ. ನಗರದಾದ್ಯಂತ ಬೀದಿನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿದ್ದು, ಮಕ್ಕಳು, ಮಹಿಳೆಯರು ಭಯದಿಂದಲೇ ಓಡಾಡುವಂತಾಗಿದೆ. ಮಕ್ಕಳು ಆಟವಾಡಲು, ಸಾರ್ವಜನಿಕರು ವಾಕ್ ಮಾಡಲು, ಸಂಜೆ ಸಮಯದಲ್ಲಿ ಹೊರಗಡೆ ಹೋಗಲು ಭಯಭೀತರಾಗಿದ್ದು, ಸಾರ್ವಜನಿಕರಿಗೆ ತಲೆನೋವಿನ ಸಂಗತಿಯಾಗಿದೆ. ಇನ್ನೂ ವಾಹನ ಸವಾರರನ್ನೂ ನಾಯಿಗಳ ಹಿಂಡು ಅಟ್ಟಾಡಿಸಿಕೊಂಡು ಹೋಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿದ್ದು ಎಲ್ಲಿ ನಾಯಿಗಳು ಓಡಿಸಿಕೊಂಡು ಬರುತ್ತವೋ ಎಂದು ಜೀವ ಕೈಯಲ್ಲಿಹಿಡಿದುಕೊಂಡೇ ಓಡಾಡುವಂತಾಗಿದೆ. ನಗರಸಭೆ ಇತ್ತ ಗಮನಹರಿಸಿ ಬೀದಿ ನಾಯಿಗಳನ್ನು ನಿಯಂತ್ರಿಸಿ ಸಾರ್ವಜನಿಕರು ನೆಮ್ಮದಿಯಿಂದ ಓಡಾಡುವಂತೆ ಕ್ರಮಕೈಗೊಳ್ಳಬೇಕೆಂದು ನಾಗರೀಕರು ಒತ್ತಾಯಿಸಿದ್ದಾರೆ.

ರಾಜ್ಯದಲ್ಲೂ ಕಾಂಗ್ರೆಸ್‌ಗೆ ಸೋಲು: ಸದಾಶಿವಯ್ಯ

ತಿಪಟೂರು: ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶ ನೋಡಿದರೆ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಧೂಳಿಪಟವಾದಂತೆ ರಾಜ್ಯದಲ್ಲೂ ಉಚಿತ ಘೋಷಣೆಗಳ ನಿರ್ವಹಣೆಗೆ ಹೆಣಗಾಡುತ್ತಿರುವ ರಾಜ್ಯ ಕಾಂಗ್ರೆಸ್ ಆಡಳಿತ ಮುಂದಿನ ಚುನಾವಣೆಯಲ್ಲಿ ನೆಲ ಕಚ್ಚಲಿದೆ ಎಂದು ಬಿಜೆಪಿ ಸ್ಥಾಪಕ ಸದಸ್ಯ ಕೆ.ಎಸ್. ಸದಾಶಿವಯ್ಯ ನೀಡಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಭಿವೃದ್ಧಿ ಮತ್ತು ವಿಕಸಿತ ಭಾರತ ನಿರ್ಮಾಣ ಮಾಡಬೇಕು ಎಂಬ ಎನ್‌ಡಿಎ ಬದ್ಧತೆಗೆ ಮತದಾರರು ಆಶೀರ್ವಾದ ಮಾಡಿದ್ದಾರೆ. ಕೇವಲ ಉಚಿತ ಘೋಷಣೆಗಳನ್ನು ಮಾಡಿ ದೀರ್ಘಕಾಲ ಜನರನ್ನು ಮರಳು ಮಾಡಲು ಸಾಧ್ಯವಿಲ್ಲ ಎಂಬುದು ಸಾಬೀತಾಗುತ್ತಿದೆ. ಮೌಲ್ಯಾಧಾರಿತ ಅಭಿವೃದ್ಧಿ ಸ್ಥಿರತೆ ಮತ್ತು ಪಾರದರ್ಶಕತೆಯ ಸರ್ಕಾರವನ್ನು ಜನರು ಬಯಸುತ್ತಿದ್ದಾರೆ. ಮೋದಿ ಹಾಗೂ ಅಮಿತ್‌ಶಾ ಅವರ ನಾಯಕತ್ವದಲ್ಲಿ ಜನತೆಯ ದೃಢ ವಿಶ್ವಾಸವನ್ನು ಮತ್ತೊಮ್ಮೆ ದೃಢಪಡಿಸಿದೆ ಎಂದು ತಿಳಿಸಿದ್ದಾರೆ.

ಶಾಸಕರ ಜನಸಂಪರ್ಕ ಸಭೆ

ಶಿರಾ: ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಬಿ.ಸುರೇಶ್ ಬಾಬು ಅವರು ಶಿರಾ ತಾಲೂಕು ಕಚೇರಿಯಲ್ಲಿ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳ ಉಪಸ್ಥಿತಿಯಲ್ಲಿ ಬುಕ್ಕಾಪಟ್ಟಣ ಹೋಬಳಿಯ ರೈತರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ 49ನೇ ವಾರದ ಜನಸಂಪರ್ಕ ಸಭೆ ನಡೆಸಿದರು. ಸಭೆಯಲ್ಲಿ ರೈತರು ಮತ್ತು ಸಾರ್ವಜನಿಕರ ಕುಂದುಕೊರತೆಗಳನ್ನ ಆಲಿಸಿ, ಅಹವಾಲುಗಳನ್ನು ಸ್ವೀಕರಿಸಿ ಹಲವು ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸಲಾಯಿತು. ಇನ್ನೂ ಕೆಲವು ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ವಾಟ್ಸಪ್ ಮೂಲಕ ಪಿಡಿಎಫ್ ರೂಪದಲ್ಲಿ ವರ್ಗಾವಣೆ ಮಾಡಲಾಗಿದ್ದು, ಅವುಗಳ ಕುರಿತು ಮುಂದಿನ ಸಭೆಯಲ್ಲಿ ಮಾಹಿತಿ ನೀಡುವಂತೆ ಸೂಚಿಸಲಾಯಿತು. ಇನ್ನು ಮುಂದೆ ವಿಧವಾ ವೇತನ, ವೃದ್ಧಾಪ್ಯ ವೇತನ ಹಾಗೂ ವಿಶೇಷ ವೇತನಗಳಿಗೆ ಅರ್ಜಿ ಸಲ್ಲಿಸುವವರು ಕುಂದುಕೊರತೆಗಳ ಸಭೆಗೆ ಹಾಜರಾಗಿ ಅರ್ಜಿ ನೀಡಿದಲ್ಲಿ, ಒಂದು ವಾರದೊಳಗೆ ಮಂಜೂರು ಪತ್ರ ನೀಡಲಾಗುವುದು ಎಂದು ಸಾರ್ವಜನಿಕರಿಗೆ ತಿಳಿಸಲಾಯಿತು. ಸಭೆಯಲ್ಲಿ ತಹಸೀಲ್ದಾರ್‌ಆನಂದ್ ಕುಮಾರ್, ಇಒ ಹರೀಶ್, ಬುಕ್ಕಾಪಟ್ಟಣ ಹೋಬಳಿ ಪ್ರಭಾರ ಕಂದಾಯ ಅಧಿಕಾರಿ ಪವನ್ ಇದ್ದರು.

ಗೌಡೇಟಿ ಪ್ರಭಾಕರ್ ಆರೋಪದಲ್ಲಿ ಹುರುಳಿಲ್ಲ

ರೈತ ಸತ್ಯನಾರಾಯಣಶಾಸ್ತ್ರಿ, ದಲಿತ ಮುಖಂಡ ಕನ್ನಮೇಡಿ ಕೃಷ್ಣಮೂರ್ತಿ ಸ್ಪಷ್ಟನೆ | ಹೋರಾಟದ ಎಚ್ಚರಿಕೆ

• **ಕನ್ನಡಪ್ರಭ ವಾರ್ತೆ** ಪಾವಗಡ

ಇತ್ತೀಚೆಗೆ ಜಮೀನು ಖಾತೆಗಳ ಪರಬಾರೆ ವಿಚಾರಕ್ಕೆ ಸಂಬಂಧ ಪಟ್ಟಂತೆ ತಹಸೀಲ್ದಾರ್ ಹಾಗೂ ಗ್ರಾಮ ಆಡಳಿತಾಧಿಕಾರಿಯ ವಿರುದ್ಧ ತಾಲೂಕಿನ ಗೌಡೇಟಿ ಪ್ರಭಾಕರ್ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದ್ದು ಅವರ ಆರೋಪಕ್ಕೂ ನಮ್ಮ ಜಮೀನಿಗೂ ಸಂಬಂಧವೇ ಇಲ್ಲ ಎಂದು ರೈತ ಸತ್ಯನಾರಾಯಣಶಾಸ್ತ್ರಿ ಹಾಗೂ ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಕನ್ನಮೇಡಿ ಕೃಷ್ಣಮೂರ್ತಿ ಸ್ಪಷ್ಟನೆ ನೀಡಿದರು.

ಇದೇವಿಚಾರಕ್ಕೆಸಂಬಂಧಪಟ್ಟಂತೆಬುಧವಾರಪಟ್ಟಣದಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸತ್ಯನಾರಾಯಣಶಾಸ್ತ್ರಿ ತಹಸೀಲ್ದಾರ್ ಹಾಗೂ ಇತರೆ ಕಂದಾಯ ಇಲಾಖೆಯ ಅಧಿಕಾರಿಗಳ ವಿರುದ್ಧ ಮಾಧ್ಯಮಗಳ ಮೂಲಕ ಏಕವಚನದಲ್ಲಿ ಪ್ರಭಾಕರ್‌ಮಾತನಾಡಿದ್ದು ಅವರ ನಡೆ ಸೂಕ್ತವಲ್ಲ ಎಂದು ಆಕ್ರೋಶ ಹೊರಹಾಕಿದರು.

ತಾಲೂಕಿನ ಕನಕಪುರ ಗ್ರಾಮದ ಸರ್ವೆ ನಂಬರ್11/1ರಲ್ಲಿನ ಇನಾಂ ಜಮೀನು ಪುರೋಹಿತರಿಗೆ ಸರ್ಕಾರದಿಂದ ಮಂಜೂರಾಗಿತ್ತು. ಈ ಜಮೀನನ್ನು ಪ್ರಭಾಕರ್‌ಅವರು ತಮ್ಮ ಅಳಿಯನಿಗೆ ಅಗ್ರಿಮೆಂಟ್ ಮಾಡಿಕೊಟ್ಟಿದ್ದು, ಲೋಕಅದಾಲತ್ ಮೂಲಕ ವ್ಯವಹಾರ ನಡೆಸಿದ್ದಾರೆ. ನಂತರ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ತಕರಾರು ಬಂದಿದೆ. ಈ ತಕರಾರು ಅರ್ಜಿಯು ಪ್ರಸ್ತುತ ತಹಸೀಲ್ದಾರ್ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ. ಹೀಗಿರುವಾಗ ಪ್ರಭಾಕರ್‌ಅವರು ಪತ್ರಿಕಾಗೋಷ್ಠಿ ಕರೆದು ಅಧಿಕಾರಿಗಳು ನಕಲಿ ದಾಖಲೆ ಸೃಷ್ಟಿಸಿದ್ದಾರೆ ಎಂದು ಆರೋಪಿಸುವುದು ಮತ್ತು ಅವರನ್ನು ಏಕವಚನದಲ್ಲಿ ಸಂಬೋಧಿಸುವುದು ಸರಿಯಲ್ಲ ಎಂದರು.

ದೂರುದಾರರು ಮಾಡುತ್ತಿರುವ ಆರೋಪಗಳಲ್ಲಿ ನೈಜತೆಯಿಲ್ಲ, ನಮ್ಮ ಹೆಸರನ್ನು ಅಥವಾ ಕುಟುಂಬದ ಹೆಸರನ್ನುಬಳಸಿಕೊಂಡುಜಮೀನಿನವಿಚಾರದಲ್ಲಿಇಲ್ಲಸಲ್ಲದ ವಿವಾದಸೃಷ್ಟಿಸಿದ್ದುಅಧಿಕಾರಿಗಳಮೇಲೆಆರೋಪಮಾಡುವ ಉದ್ದೇಶದಿಂದನಮ್ಮನ್ನುಎಳೆದುತಂದಿದ್ದಾರೆ. ವಂಶವೃಕ್ಷವೇ ಸುಳ್ಳಿನಿಂದ ಕೂಡಿದೆ. ಆ ವಂಶವೃಕ್ಷದಲ್ಲಿರುವ ಹೆಸರುಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ. ನಕಲಿ ವಂಶವೃಕ್ಷ ಸೃಷ್ಟಿಸಿ ದಾರಿ ತಪ್ಪಿಸುವ ಕೆಲಸ ಮಾಡಲಾಗುತ್ತಿದೆ ಎಂದು ಆಕ್ರೋಶ ಹೊರಹಾಕಿದರು.



ಪಾವಗಡ ಜಮೀನು ಆರೋಪ ವಿಚಾರಕ್ಕೆ ಸಂಬಂಧಪಟ್ಟಂತೆ ಸಮಾಜ ಸೇವಕ ಪ್ರಭಾಕರ್ ವಿರುದ್ಧ ಪತ್ರಿಕಾಗೋಷ್ಠಿಯಲ್ಲಿ ಸತ್ಯನಾರಾಯಣ ಶಾಸ್ತ್ರಿ ಹಾಗೂ ಕೃಷ್ಣಮೂರ್ತಿ ಸ್ಪಷ್ಟನೆ ನೀಡಿದರು.

ಮಾದಿಗ ಹೋರಾಟ ಸಮಿತಿ ಅಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿ ಗೌಡೇಟಿ ಪ್ರಭಾಕರ್‌ರವರೇ ಭೂ ಕಬಳಿಕೆ ಮಾಡಿದ್ದು, ಕನಕಪುರ ಸರ್ವೆ ನಂಬರ್20 ರಲ್ಲಿ ಸರ್ಕಾರದಿಂದ 4 ಎಕರೆ ಮಂಜೂರಾಗಿದೆ. ಮತ್ತೊಂದು 4 ಎಕರೆ ಜಮೀನನ್ನು ಇವರು ಅಕ್ರಮವಾಗಿ ಕಬಳಿಸಿದ್ದಾರೆ. ಇವರು ಕನಕಪುರ ಗ್ರಾಮದಲ್ಲಿ ಪ್ರಾರಂಭಿಸಿರುವ ಬಾರ್ ಆ್ಯಂಡ್ ರೆಸ್ಟೋರೆಂಟ್ ನಿವೇಶನವು ಭೂ ಪರಿವರ್ತನೆ ಆಗಿಲ್ಲ. ದಲಿತ ಸಮುದಾಯದಿಂದ ಬಂದ ಅಧಿಕಾರಿಗಳನ್ನು ಅವಹೇಳನಕಾರಿಯಾಗಿ ಮಾತನಾಡಿಸುವುದು ಸಮಂಜಸ ವಲ್ಲ. ಇದೇ ರೀತಿ ಸುಳ್ಳು ಆರೋಪಗಳನ್ನು ಮುಂದುವರಿಸಿದರೆ, ದಲಿತಪರ ಸಂಘಟನೆಗಳ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲು ಸಜ್ಜಾಗುವುದಾಗಿ ಎಚ್ಚರಿಕೆ ನೀಡಿದರು.

ಸೆಕ್ಯೂರಿಟಿ ಸೂಪರ್‌ವೈಸರ್ ಪುತ್ರ ಈಗ ಡಾಕ್ಟರ್

ಗುಜ್ಜಾರಹಳ್ಳಿ ಗ್ರಾಮದ ಗಂಗಾಧರಯ್ಯ ಪುತ್ರ ಎಂಬಿಬಿಎಸ್ ಪಾಸಾಗಿ ಸಾಧನೆ

• **ಕನ್ನಡಪ್ರಭ ವಾರ್ತೆ** ಪಾವಗಡ



ನ್ಯಾಯದಗುಂಟೆ ಡಾ.ಹರ್ಷವರ್ಧನ್

ಬಡತನಎಂಬುದುಸಾಧನೆಗೆಅಡ್ಡಿಯಲ್ಲ, ಛಲವೊಂದಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆಪಾವಗಡತಾಲೂಕಿನ ಈ ತಂದೆ-ಮಗನ ಜೋಡಿಯೇ ಸಾಕ್ಷಿಯಾಗಿದೆ.

ಇದೇ ತಾಲೂಕಿನ ನ್ಯಾಯದ ಗುಂಟೆ ಗ್ರಾಪಂ ವ್ಯಾಪ್ತಿಯ ಗುಜ್ಜಾರಹಳ್ಳಿ ಗ್ರಾಮದ ಬಡ ಕುಟುಂಬವೊಂದರ ನಿವಾಸಿ ಯಾದ ಗಂಗಾಧರಯ್ಯ ಅವರು ಪುತ್ರ ಡಾ.ಹರ್ಷವರ್ಧನ್ ಎಂಬಿಬಿಎಸ್ ಮಾಡುವ ಮೂಲಕ ಇಡೀ ತಾಲೂಕು ಹೆಮ್ಮೆಪಡುವಂತಹ ಕೆಲಸ ಮಾಡಿದ್ದು, ತಂದೆ ಗಂಗಾಧರಯ್ಯ ಅವರು ಬೆಂಗಳೂರಿನಲ್ಲಿ ಖಾಸಗಿ ಕಂಪನಿಯೊಂದರಲ್ಲಿಸೆಕ್ಯೂರಿಟಿ ಸೂಪರ್‌ವೈಸರ್‌ಆಗಿ ಕೆಲಸ ಮಾಡುತ್ತಾ, ಅಹೋರಾತ್ರಿ ಕಷ್ಟಪಟ್ಟು ತಮ್ಮ ಮಗನನ್ನು ಎಂಬಿಬಿಎಸ್ ವ್ಯಾಸಂಗ ಮಾಡಿಸಿದ ಹಿನ್ನೆಲೆಯಲ್ಲಿ ಇಂದು ಅವರ ಪುತ್ರ ಡಾ. ಹರ್ಷವರ್ಧನ್ ವೈದ್ಯನಾಗಿ ರೂಪಗೊಂಡಿದ್ದಾರೆ.

ತಂದೆಯ ಶ್ರಮಕ್ಕೆ ತಕ್ಕ ಪ್ರತಿಫಲ ನೀಡಿದ ಮಗ

ಮಗ ಕೂಡ ತಂದೆಯ ಕಷ್ಟವನ್ನು ಅರ್ಥಮಾಡಿಕೊಂಡು ರಾತ್ರಿ-ಹಗಲು ಅಭ್ಯಾಸ ಮಾಡಿ ವೈದ್ಯಕೀಯ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ. ಒಬ್ಬ ಸಾಮಾನ್ಯ ಸೆಕ್ಯೂರಿಟಿ ಸೂಪರ್‌ವೈಸರ್‌ಮಗ ಇಂದು ಡಾಕ್ಟರ್ ಆಗಿ ಹೊರಬಂದಿರುವುದು ಗುಜ್ಜಾರಹಳ್ಳಿ ಗ್ರಾಮಕ್ಕೆ ಮಾತ್ರವಲ್ಲದೆ ಇಡೀ ಪಾವಗಡ ತಾಲೂಕಿಗೆ ಹೆಮ್ಮೆಯ ವಿಷಯವಾಗಿದೆ.

ಹಸಿವಿನ ನಡುವೆ ಕಂಡ ದೊಡ್ಡ ಕನಸು: ಗ್ರಾಮೀಣ ಭಾಗದಸಾಮಾನ್ಯಕುಟುಂಬದಿಂದಬಂದಗಂಗಾಧರಯ್ಯ ಅವರಿಗೆ ಶಿಕ್ಷಣದ ಮಹತ್ವ ಚೆನ್ನಾಗಿ ತಿಳಿದಿತ್ತು.ಕಳೆದ 10ವರ್ಷದ ಹಿಂದೆ ಕೂಲಿ ಕೆಲಸ ಹಾಗೂ, ಸಣ್ಣಪುಟ್ಟ ಉದ್ಯೋಗವೋ ಯಾವುದನ್ನೂ ಲೆಕ್ಕಿಸದೆ ಮಗನ ಭವಿಷ್ಯಕ್ಕಾಗಿ ಬೆಂಗಳೂರಿಗೆ ಪಯಣ ಬೆಳೆಸಿದರು. ಅಲ್ಲಿ ಸೆಕ್ಯೂರಿಟಿ ಸೂಪರ್‌ವೈಸರ್‌ಆಗಿ ಕೆಲಸಕ್ಕೆ ಸೇರಿದ ಅವರು, ಬರುವ ಅಲ್ಪ ಆದಾಯದಲ್ಲೇ ಮಗನ ದುಬಾರಿ ವೈದ್ಯಕೀಯ ಶಿಕ್ಷಣದ ವೆಚ್ಚವನ್ನು ಸರಿದೂಗಿಸಿದರು.

ಗ್ರಾಮಸ್ಥರ ಮೆಚ್ಚುಗೆ: ತಂದೆ ಗಂಗಾಧರಯ್ಯ ಅವರ ಈ ಸಾಧನೆಯನ್ನು ಕಂಡು ನ್ಯಾಯದಗುಂಟೆ ಗ್ರಾಪಂ ವ್ಯಾಪ್ತಿಯಜನರುಮೆಚ್ಚುಗೆವ್ಯಕ್ತಪಡಿಸಿದ್ದು, ಸ್ವಂತಊರು ಬಿಟ್ಟು ಪರವೂರಿನಲ್ಲಿ ಕಷ್ಟಪಟ್ಟು ಮಗನನ್ನು ಇಷ್ಟು ದೊಡ್ಡ ಮಟ್ಟಕ್ಕೆ ಬೆಳೆಸಿದ ಗಂಗಾಧರಯ್ಯ ಅವರು ಎಲ್ಲರಿಗೂ ಮಾದರಿಎಂದುಗ್ರಾಮಸ್ಥರುಸಂತಸಹಂಚಿಕೊಂಡಿದ್ದಾರೆ. ಬಡ ಕುಟುಂಬದ ಹಿನ್ನೆಲೆಯಲ್ಲಿ ಬೆಳೆದು ತಮ್ಮ ಮಗ ಡಾ.ಹರ್ಷವರ್ಧರನ್ನು ಈ ಉನ್ನತ ವ್ಯಾಸಂಗ ಮಾಡಿಸುವ ಮೂಲಕ ಎಂಬಿಬಿಎಸ್ ಮಟ್ಟಕ್ಕೆ ಬೆಳೆಸಿದ ತಂದೆ ಗಂಗಾಧರಯ್ಯ ಹಾಗೂ ಪುತ್ರ ಡಾ.ಹರ್ಷವರ್ಧನ್ ಅವರಿಗೆ ಪಾವಗಡ ಠಾಣೆ ಪೊಲೀಸ್ ಗೋವಿಂದರಾಜು, ಪರಮೇಶ್ವರಪ್ಪ, ನಾಗರಾಜ್ ಓಬಳಾಪುರ ತಿಪ್ಪೇಸ್ವಾಮಿ ಇತರರು ಅಭಿನಂದನೆ ಸಲ್ಲಿಸಿದ್ದಾರೆ.

ಬಿಎಸ್‌ವೈ ಕಾರ್ಯಕ್ರಮಕ್ಕೆ 5000 ಜನ



ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿ.

• **ಕನ್ನಡಪ್ರಭ ವಾರ್ತೆ** ಕುಣಿಗಲ್

ರೈತಪರ ಹೋರಾಟಗಾರ ಬಿಎಸ್ ಯಡಿಯೂರಪ್ಪ ಅವರ ನಿಸ್ವಾರ್ಥ ಸೇವೆಯ ನೆನಪಿಗಾಗಿ ಮಾಡುತ್ತಿರುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಕುಣಿಗಲ್ ತಾಲೂಕಿನಿಂದ 100 ಬಸ್ಸಿನ ಮುಖಾಂತರ 5000 ಜನ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಮುಖಂಡ ಡಿ.ಕೃಷ್ಣಕುಮಾರ್‌ತಿಳಿಸಿದ್ದಾರೆ.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರೈತರ ಪರವಾಗಿ ಧ್ವನಿ ಎತ್ತಿದ ನಾಯಕರಲ್ಲಿ ಮೊದಲಿಗರಾದ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಅಧಿಕಾರವನ್ನು ಕೂಡ ರೈತರಿಗಾಗಿ ಅರ್ಪಿಸಿದರು. ಹಾಲಿಗೆ ಪ್ರೋತ್ಸಾಹ ಧನ ನೀಡುವ ಮುಖಾಂತರ ರೈತರಿಗೆ ಶಕ್ತಿ ತುಂಬಿದ ಮಹಾನಾಯಕ. ಇಂತಹ ಜನಪರ ನಾಯಕರನ್ನು ಎಲ್ಲಾ ಪಕ್ಷದವರು ಪ್ರೀತಿಸುತ್ತಾರೆ ಗೌರವಿಸುತ್ತಾರೆ ಹಾಗಾಗಿ ಪಕ್ಷಾತೀತವಾಗಿ ಈ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುತ್ತಿದೆ ಎಂದರು.

ಬಿಜೆಪಿ ತಾಲೂಕು ಅಧ್ಯಕ್ಷ ಕೊಡಗಿಹಳ್ಳಿ ದಿನೇಶ್‌ಮಾತನಾಡಿಕರ್ನಾಟಕದಲ್ಲಿಬಿಜೆಪಿ ಅಧಿಕಾರಕ್ಕೆ ಬರಲು ಕಾರಣರಾದ ಯಡಿಯೂರಪ್ಪ ಅವರನ್ನು ಸ್ಮರಿಸಬೇಕಾಗಿರುವುದು ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನ ಜವಾಬ್ದಾರಿ. ಅವರು ಮಾಡಿರುವ ಹಲವಾರು ಸಾಧನೆಗಳು ಜನಪರ ಹೋರಾಟಗಳ ಪರಿಣಾಮವಾಗಿ ಬಿಜೆಪಿ ಅಧಿಕಾರ ನಡೆಸಿದೆ. ಅಂತ ಮಹಾ ನಾಯಕರಿಗೆ ನಾವು ಗೌರವ ಸಲ್ಲಿಸುವ ಅದ್ಭುತ ಕಾರ್ಯಕ್ರಮವಾಗಿದೆ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಹಿರಿಯ ಮುಖಂಡರಾದ ಸಂತೋಷ್, ದಿಲೀಪ್, ಧನುಷ್, ಅಮರ್ ಇದ್ದರು .

ಶೆಟರ್‌ಮುರಿದು ಬಂಗಾರದ ಅಂಗಡಿ ಕಳ್ಳತನ

ಬುಕ್ಕಾಪಟ್ಟದಲ್ಲಿ ಹೆಚ್ಚಾದ ಕಳುವು ಪ್ರಕರಣ | ಪೊಲೀಸರ ನಿರ್ಲಕ್ಷ್ಯಕ್ಕೆ ಜನರ ಆಕ್ರೋಶ

• **ಕನ್ನಡಪ್ರಭ ವಾರ್ತೆ** ಶಿರಾ

ಶಿರಾ ತಾಲೂಕು ಬುಕ್ಕಾಪಟ್ಟಣದಲ್ಲಿ ಬಂಗಾರದ ಅಂಗಡಿ ಶೆಟರ್ಸ್ ಮುರಿದು ಅಂಗಡಿಯಲ್ಲಿದ್ದ ಬೆಳ್ಳಿ ಹಾಗೂ ಬಂಗಾರದ ಒಡವೆಗಳನ್ನು ಕಳ್ಳತನ ಮಾಡಿರುವ ಪ್ರಕರಣ ಬುಧವಾರ ಬೆಳಗ್ಗೆ ಬೆಳಕಿಗೆ ಬಂದಿದೆ. ಬುಕ್ಕಾಪಟ್ಟಣದ ಹಾಗಲವಾಡಿ ಮುಖ್ಯ ರಸ್ತೆಯಲ್ಲಿರುವ ಸೂರ್ಯಪ್ರಕಾಶ್ ಕೊ ವೀರಾಚಾರ್ ಮಾಲಿಕತ್ವದ ಶ್ರೀ ವೀರಭದ್ರೇಶ್ವರ ಜ್ಯುವೆಲರಿ ವರ್ಕ್ಸ್ ಎಂಬ ಒಡವೆ ಅಂಗಡಿಯಲ್ಲಿ ಬುಧವಾರ ಬೆಳಗಿನ ಜಾವ ಅಂಗಡಿಯ ಶಟರ್‌ಮುರಿದು ಅಂಗಡಿಯಲ್ಲಿದ್ದ4 ಕೆಜಿಗೂ ಹೆಚ್ಚು ಬೆಳ್ಳಿ ಹಾಗೂ ಬಂಗಾರದ ಒಡವೆಗಳನ್ನು ಕಳ್ಳರು ದೋಚಿ ಪರಾರಿಯಾಗಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ತುಮಕೂರು ಗ್ರಾಮಾಂತರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುರುಷೋತ್ತಮ್ ಮತ್ತು ಗೋಪಾಲ್, ಶಿರಾ ತಾಲೂಕು ಪೊಲೀಸ್ ಡಿವೈಎಸ್ಪಿ ಶೇಖರ್. ವೃತ್ತ ನಿರೀಕ್ಷಕ ಪ್ರವೀಣ್ ಕುಮಾರ್, ಸಬ್ ಇನ್ಸಪೆಕ್ಟರ್‌ರೇಣುಕಾ ಯಾದವ್, ಗ್ರಾಮಾಂತರ ಇನ್ಸಪೆಕ್ಟರ್‌ಶ್ರೀನಿವಾಸ್ ಸೇರಿದಂತೆ ಶಿರಾ ನಗರ ಪೊಲೀಸ್ ಠಾಣೆಯ ಸಿಬ್ಬಂದಿ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸರಣಿಕಳ್ಳತನಗಳು: ಇತ್ತೀಚಿನದಿನಗಳಲ್ಲಿಬುಕ್ಕಾಪಟ್ಟಣದಲ್ಲಿ ದರೋಡೆ ಕಳ್ಳತನದಂತಹ ಪ್ರಕರಣಗಳು ಹೆಚ್ಚುತ್ತಿದ್ದು ಎಸ್‌ಬಿಐ ನಿವೃತ್ತ ಉದ್ಯೋಗಿ ಮನೆಗೆ ನುಗ್ಗಿದ್ದ ಕಳ್ಳರು ಬೀಗ ಮುರಿದು ಒಡವೆ ದೋಚಿದ್ದರು, ಆನಂತರ ಬುಕ್ಕಾಪಟ್ಟಣ ಗ್ರಾಮ ಪಂಚಾಯತಿ ಪಕ್ಕದ ರವಿಶಂಕರ್‌ರವರ ಮನೆ ಬೀಗ ಮುರಿದು ಮನೆ ದೋಚಲು ಪ್ರಯತ್ನ ಮಾಡಿದ್ದರು, ಹಾಗೂ ಶಿರಾ ರಸ್ತೆಯಲ್ಲಿರುವ ಪೆಟ್ಟಿಗೆ ಅಂಗಡಿಗೆ ನುಗ್ಗಿದ್ದ ಕಳ್ಳರು ಸಿಲಿಂಡರ್ ಹಾಗೂ ಅಂಗಡಿ ವಸ್ತುಗಳನ್ನು ದೋಚಿ ಪರಾರಿಯಾಗಿದ್ದರು.

ಇಷ್ಟೆಲ್ಲ ಕಳ್ಳತನದಂತಹ ಪ್ರಕರಣಗಳು ಹೆಚ್ಚುತ್ತಿದ್ದರು ಸಹ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಹಾಗೂ ಈವರೆಗೆ ಯಾವುದೇ ಕಳ್ಳರನ್ನು ಬಂಧಿಸದೇ ಇರುವುದು ಸಾರ್ವಜನಿಕರ ಆತಂಕ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ.

ಸಮಾಜದ ಆರೋಗ್ಯವನ್ನು ರಕ್ಷಿಸುವುದು ಎಲ್ಲರ ಹೊಣೆ

ಜಿಪಂ ಮಾಜಿ ಸದಸ್ಯ ಎಚ್.ಕೆಂಚಮಾರಯ್ಯ ಅಭಿಮತ



ಯರಗುಂಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ ಆವರಣದಲ್ಲಿ ಆರೋಗ್ಯ ತಪಾಸಣಾ ಉಚಿತ ಶಿಬಿರ ನಡೆಯಿತು.

ಮಧುಗಿರಿ: ಆರೋಗ್ಯವೇ ಭಾಗ್ಯ ಎಂಬಂತೆ ನಮ್ಮ ದೇಹದ ಆರೋಗ್ಯವನ್ನು ಸದೃಢರಾಗಿಸಿಕೊಂಡು ಸಮಾಜದ ಆರೋಗ್ಯವನ್ನು ರಕ್ಷಿಸುವುದು ಎಲ್ಲರ ಹೊಣೆ ಎಂದು ಜಿಪಂ ಮಾಜಿ ಸದಸ್ಯ ಎಚ್.ಕೆಂಚಮಾರಯ್ಯ ತಿಳಿಸಿದರು.

ತಾಲೂಕಿನಐ.ಡಿ.ಹಳ್ಳಿಹೋಬಳಿಯರಗುಂಟೆಗ್ರಾಮದಸರ್ಕಾರಿಹಿರಿಯಪ್ರಾಥಮಿಕ ಪಾಠ ಶಾಲೆ ಆವರಣದಲ್ಲಿ ಶ್ರೀಮುದ್ದಮ್ಮ ಸ್ಮಾರಕ ಗ್ರಾಮೀಣಾಭಿವೃದ್ಧಿ ಸೇವಾ ಟ್ರಸ್ಟ್, ಆಕಾಶ್ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ, ಆಕಾಶ್ ವೈದ್ಯಕೀಯ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ .ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜಯಂತಿ ಹಾಗೂ ಡಾ.ಬಾಬೂ ಜಗಜೀವನ್ ರಾಮ್ 119ನೇ ಜಯಂತಿ ಅಂಗವಾಗಿ ನಡೆದ ಆರೋಗ್ಯ ತಪಾಸಣಾ ಉಚಿತ ಶಿಬಿರ ಉದ್ಘಾಟಿಸಿ ಮಾತನಾಡಿದರು.

ತುಮುಲ್ ನಿರ್ದೇಶಕ ಕೊಂಡವಾಡಿ ಚಂದ್ರಶೇಖರ್ ಮಾತನಾಡಿ, ಗ್ರಾಮೀಣರು ಶುದ್ಧವಾದನೀರು, ಗಾಳಿಸೇವಿಸುವಮೂಲಕಆರೋಗ್ಯ ರಕ್ಷಿಸಿಕೊಳ್ಳಬೇಕು. ಅಶುದ್ಧನೀರು ಬಳಕೆಯಿಂದ ರೋಗಗಳು ಹರಡುತ್ತವೆ. ಆದ್ದರಿಂದ ಎಚ್ಚರ ವಹಿಸಿ ಆರೋಗ್ಯವನ್ನು ಕಾಪಾಡಿಕೊಳ್ಳಿ ಎಂದರು.

ಸಂಸ್ಥಾಪಕಅಧ್ಯಕ್ಷಎಂ.ಅಶ್ವತ್ಥಯ್ಯ ಅಧ್ಯಕ್ಷತೆವಹಿಸಿಮಾತನಾಡಿ, ಈಉಚಿತಆರೋಗ್ಯ ತಪಾಸಣಾ ಶಿಬಿರದಲ್ಲಿ ತಜ್ಞರು ಭಾಗವಹಿಸಿದ್ದು ಸಾರ್ವಜನಿಕರು ಎಲ್ಲ ಕಾಯಿಲೆಗಳಿಗೂ ಉಚಿತವಾಗಿ ಪರೀಕ್ಷಿಸಿಕೊಂಡು ಇದರ ಪ್ರಯೋಜನ ಪಡೆದು ಕೊಳ್ಳವುಂತೆ ಸಲಹೆ ನೀಡಿದರು. ಸಮಾರಂಭದಲ್ಲಿ ಜಿ.ಪಂ ಮಾಜಿ ಸದಸ್ಯ ಎಸ್.ಡಿ.ಕೃಷ್ಣಪ್ಪ, ಮುಖಂಡರಾದ ರಮೇಶ್, ರಂಗನಾಥ್ ಇತರರಿದ್ದರು.

ಕನ್ನಡದ ಕೆಲಸ | ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನದ ಸಮಾರಂಭ ಉದ್ಘಾಟಿಸಿದ ಪ್ರೊ. ಕೃಷ್ಣಮೂರ್ತಿ ಬಿಳಿಗೆರೆ

ಸಾಹಿತ್ಯ ಜನಜೀವನದ ಆಶಯಗಳನ್ನು ಪ್ರತಿಬಿಂಬಿಸಬೇಕಿದೆ

• **ಕನ್ನಡಪ್ರಭ ವಾರ್ತೆ** ತಿಪಟೂರು

ಕನ್ನಡ ಭಾಷೆ, ಸಾಹಿತ್ಯ ಕ್ಷೇತ್ರ ಎಲ್ಲಾ ಕನ್ನಡಿಗರ ಜೀವನಾಡಿಯಾಗುವ ಮೂಲಕ ಸಾಗಬೇಕಿದೆ ಯಾದರೂ ದುರಾದೃಷ್ಟವಶಾತ್ ಇತ್ತೀಚಿಗೆ ನಮ್ಮ ಸಾಹಿತ್ಯ ಜನಜೀವನದ ಆಶಯಗಳನ್ನು ಪ್ರತಿಬಿಂಬಿಸದೆ ಜನಪ್ರಿಯ ಮತ್ತು ದ್ವೇಷ ಸಾಹಿತ್ಯದ ಹಿಂದೆ ಚಲಿಸುತ್ತಿರುವುದು ವಿಷಾದನೀಯ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ, ಚಿಂತಕ ಪ್ರೊ. ಕೃಷ್ಣಮೂರ್ತಿ ಬಿಳಿಗೆರೆ ಅಭಿಪ್ರಾಯಪಟ್ಟರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ತಿಪಟೂರಿನ ಕೆ.ಎಲ್.ಎ. ಕಾನೂನು ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನಸಂಸ್ಥಾಪನಾದಿನದಸಮಾರಂಭವನ್ನು ಉದ್ಘಾಟಿಸಿಮಾತನಾಡಿದಅವರು, ಸಾವಿರಾರು ವರ್ಷಗಳ ಇತಿಹಾಸ ಇರುವ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ನಾಡಿನ ಜನರ ಮನ, ಮನೆಗಳಲ್ಲಿ ರಾರಾಜಿಸಬೇಕಿದೆ. ಸಾಹಿತ್ಯ, ಸಾಹಿತಿಗಳು ಹಾಗೂ ಕನ್ನಡ ಭಾಷೆ, ಸಂಸ್ಕೃತಿ ಕಾರ್ಯಕ್ರಮಗಳನ್ನು ಸರ್ಕಾರಗಳು ಎಲ್ಲೆಡೆ ಹೆಚ್ಚು ಆಯೋಜನೆ ಮಾಡುವ ಮೂಲಕ ಯಾವಾಗಲೂ ಪ್ರೋತ್ಸಾಹಿಸಬೇಕೆಂದು ತಿಳಿಸಿದರು.



ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನದ ಸಮಾರಂಭದಲ್ಲಿ ವಿವಿಧ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮಕ್ಕಳ ಸಾಹಿತಿ ಪ್ರೊ. ಟಿ.ಎಸ್. ನಾಗರಾಜ ಶೆಟ್ಟರ್, ಸಾಮಾಜಿಕ ಅಭಿವೃದ್ಧಿಯಹರಿಕಾರ, ಮಾದರಿ ಮೈಸೂರಿನ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್.ಎಂ. ವಿಶ್ವೇಶ್ವರಯ್ಯನವರು ನಾಡು, ನುಡಿ, ಸಂಸ್ಕೃತಿಗಳ ಅಭಿವೃದ್ಧಿಗೆ ಪೂರಕವಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಹುಟ್ಟು ಹಾಕಿದ್ದರ ಫಲವಾಗಿ ಕಸಾಪ ಉದಯವಾಯಿತು. ಅಂದಿನಿಂದ ಪರಿಷತ್ ಭಾಷಾ ಬೆಳವಣಿಗೆಯಲ್ಲಿ ಹಲವು ಕ್ಲಿಷ್ಟಕರ ಸಂದರ್ಭಗಳಲ್ಲಿ ಮಹತ್ವದ ಪಾತ್ರ ನಿರ್ವಹಿಸಿದೆ. ಕನ್ನಡ ನಾಡು, ನುಡಿ, ಸಂಸ್ಕೃತಿ, ಪುಸ್ತಕ ಸಂಸ್ಕೃತಿ ಇನ್ನಿತರೆ ಚಟುವಟಿಕೆಗಳು ನಿರಂತರವಾಗಿ ಸಾಗಲು ಹೆಚ್ಚು ಒತ್ತು ನೀಡಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೆ.ಎಲ್.ಎ. ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರಸನ್ನರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಲವಾರು ವರ್ಷಗಳಿಂದ ಜನ ಮಾನಸಕ್ಕೆ ಹತ್ತಿರವಾಗುವಂತಹ ನೂರಾರು ಕಾರ್ಯಕ್ರಮಗಳನ್ನು ತಾಲೂಕಿನಾದ್ಯಂತ ಆಯೋಜಿಸಿ ಮೆಚ್ಚುಗೆಗೆ ಪಾತ್ರವಾಗಿರುವುದುಅಭಿನಂದನೀಯಎಂದು ಅಭಿಪ್ರಾಯಪಟ್ಟರು. ನಗರದಅಡ್ವಿನ್‌ಪ್ಯಾರಾ ಮಡಿಕಲ್ ಸಂಸ್ಥೆಯ ಕಾರ್ಯದರ್ಶಿ ಮತ್ತು ಪ್ರಾಂಶುಪಾಲರಾದ ಶಮಂತ ಎಚ್.ಎಸ್. ಹಾಗೂ ಎಂ. ಡಿ. ಶಿವಕುಮಾರ್ ಮಾತನಾಡಿದರು.

ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಪ್ರಶ್ನೆಗಳಿಗೆ ಉತ್ತರಿಸಿದ ತಾಲೂಕು ಕ.ಸಾ.ಪ ಅಧ್ಯಕ್ಷರಾದ ಎಂ. ಬಸವರಾಜಪ್ಪನವರು ಯುವಕರು, ವಿದ್ಯಾರ್ಥಿ ಗಳು ಹೆಚ್ಚು ಸಂಖ್ಯೆಯಲ್ಲಿ ಪರಿಷತ್ತಿನ ಆಜೀವ ಸದಸ್ಯತ್ವ ಪಡೆಯುವ ಮೂಲಕ ನಾಡು, ನುಡಿಯ ಪ್ರಗತಿಯಲ್ಲಿ ಪಾಲ್ಗೊಳ್ಳಿ ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿದ ತಾಲೂಕಿನ ನಾಲ್ಕು ಹೋಬಳಿಗಳಅಧ್ಯಕ್ಷರಾದಎನ್.ಚನ್ನಬಸಪ್ಪ, ಡಾ.ಪಿ.ಶಂಕರಪ್ಪಬಳ್ಳೆಕಟ್ಟೆ, ಹೆಚ್.ನಂದೀಶಪ್ಪ ಮತ್ತು ಹೆಚ್.ಎಸ್. ಓಂಕಾರಯ್ಯನವರನ್ನು ಆತ್ಮೀಯವಾಗಿಗೌರವಿಸಿಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬಿ. ನಾಗರಾಜು, ಪಿ. ರೇಖಾ.ಎಚ್.ಎಸ್.ಮಂಜಪ್ಪ.ಕೆ.ಸಿ.ಮಲ್ಲಿಕಾರ್ಜುನಯ್ಯ, ಟಿ.ಸಿ.ಗೋವಿಂದರಾಜು, ಕಾಲೇಜು ಸಿಬ್ಬಂದಿ ಉಪಸ್ಥಿತರಿದ್ದರು.

ಸುದ್ದಿ ಸಿಂಚನ

ಮಳೆರಾಯನಿಗೆ ದೊಣ್ಣೆರೆ ಗ್ರಾಮಸ್ಥರಿಂದ ಪ್ರಾರ್ಥನೆ



ಗುಬ್ಬಿ: ಉರಿ ಬಿಸಿಲಿಗೆ ತಗ್ಗಿದ ಅಂತರ್ಜಲದಿಂದ ಕೃಷಿ ಚಟುವಟಿಕೆ ಮಾಡಲಾಗದೆ ಬೇಸತ್ತ ಕಡಬ ಹೋಬಳಿ ದೊಣ್ಣೆರೆ ಗ್ರಾಮಸ್ಥರು ಮಳೆರಾಯನ ಮಣ್ಣಿನ ಮೂರ್ತಿ ಸಿದ್ಧಪಡಿಸಿ ಊರಿನಲ್ಲಿ ಮೆರವಣಿಗೆ ನಡೆಸಿ ಹುಯ್ಯೋ ಹುಯ್ಯೋ ಮಳೆರಾಯ ಎಂದು ಪ್ರಾರ್ಥಿಸಿದರು.ಗುಬ್ಬಿ ದೊಣ್ಣೆರೆ ಊರಿನ ಶ್ರೀ ಆಂಜನೇಯಸ್ವಾಮಿ ದೇವಾಲಯದಲ್ಲಿ ಮಳೆರಾಯನ ಮಣ್ಣಿನ ಮೂರ್ತಿ ಸಿದ್ಧಪಡಿಸಿ ಊರಿನ ಒಟ್ಟು 90 ಮನೆಯವರು ಒಟ್ಟಾಗಿ ಸೇರಿ ಹಸಿರು ತೋರಣ ಸಿಂಗಾರ ಊರಲ್ಲಿ ನಡೆಸಿ ಹಬ್ಬದ ವಾತಾವರಣ ಸೃಷ್ಟಿ ಮಾಡಿದರು. ವರುಣನ ಅವಕೃಪೆಗೆ ಮಳೆರಾಯ ಮೂರ್ತಿ ಹೊತ್ತು ವಾದ್ಯಗಳೊಂದಿಗೆ ಪ್ರತಿ ಮನೆಗೆ ತೆರಳಿ ಪೂಜೆ ಸ್ವೀಕರಿಸಿ ನೀರಿನ ಅಭಿಷೇಕ ಪಡೆದು ಹುಯ್ಯೋ ಹುಯ್ಯೋ ಮಳೆರಾಯ ಹೂವಿನ ತೋಟಕ್ಕೆ ನೀರಿಲ್ಲ, ಬಾಳೆ ತೋಟಕ್ಕೆ ನೀರಿಲ್ಲ ಇತ್ಯಾದಿ ಘೋಷಣೆಯನ್ನು ಕೂಗುತ್ತಾ ಮಳೆರಾಯನ ಆಗಮನಕ್ಕೆ ಪ್ರಾರ್ಥನೆ ಸಲ್ಲಿಸಿದರು. ಗುಬ್ಬಿ ತಾಲೂಕಿನ ಊರಿನ ಎಲ್ಲಾ ಮನೆ ತಲುಪಿ ನಂತರ ವಿಶೇಷ ಅಲಂಕಾರದಿಂದ ಸಿದ್ಧವಾದ ದೇವಾಲಯದ ಆವರಣಕ್ಕೆ ಮೆರವಣಿಗೆ ತಲುಪಿತು. ಗ್ರಾಮ ದೇವರಿಗೆ ಪೂಜೆ ಸಲ್ಲಿಸಲಾಯಿತು. ಎಲ್ಲರಿಗೂ ದಾಸೋಹ ವ್ಯವಸ್ಥೆಯನ್ನು ಗ್ರಾಮಸ್ಥರೇ ಮಾಡಿದ್ದರು. ಕಳೆದ ಎರಡು ತಿಂಗಳಿಂದ ಬೇಸಿಗೆಯ ಉಷ್ಣತೆಗೆ ಕಂಗಾಲಾದ ರೈತರು ದೇವರ ಮೊರೆ ಹೋಗಿದ್ದಾರೆ ಎಂದು ಸ್ಥಳೀಯ ಮುಖಂಡ ಭರತ್ ಕುಮಾರ್ ತಿಳಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಯುವಕರಾದ ಸೋಮಶೇಖರ್, ಗಿರೀಶ್, ವೀರೇಶ್, ರಂಜಿತ್, ಅಮಿತ್, ವೆಂಕಟೇಶ್, ಹೃತಿಕ್, ಪುನೀತ್, ಚೇತನ್ ಕುಮಾರ್, ಶಿವಕುಮಾರ್, ಹರೀಶ್, ಮಧು, ವಿನಯ್, ಶಾಂತರಾಜು, ನವೀನ್, ಗುರುಸ್ವಾಮಿ ಸೇರಿದಂತೆ ಎಲ್ಲಾ ಗ್ರಾಮಸ್ಥರು ಇದ್ದರು.

ಬಿಎಸ್‌ವೈ ಅಭಿಮಾನೋತ್ಸವ ಯಶಸ್ವಿಗೆ ಮನವಿ

ಶಾಸಕರಾದ ವಿಶ್ವನಾಥ್, ಗೋಪಾಲಯ್ಯ, ಕೃಷ್ಣಪ್ಪ, ಮುನಿರಾಜು, ಮುನಿರತ್ನ, ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯನಾಯ್ಡು ಭಾಗಿ

• **ಕನ್ನಡಪ್ರಭ ವಾರ್ತೆ** ತುಮಕೂರು

ಈ ತಿಂಗಳ 9 ರಂದು ಚಿತ್ರದುರ್ಗದಲ್ಲಿ ಏರ್ಪಾಟಾಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಅಭಿಮಾನೋತ್ಸವ ಸಮಾರಂಭದ ಹಿನ್ನೆಲೆಯಲ್ಲಿ ನಗರದ 32ನೇ ವಾರ್ಡಿನ ಬಿಜೆಪಿ ಮುಖಂಡರಿಂದ ಸಭೆ ಆಯೋಜಿಸಲಾಗಿತ್ತು.

ಅಭಿಮಾನೋತ್ಸವದ ಆಹಾರ ಸಮಿತಿ ಉಸ್ತುವಾರಿ ವಹಿಸಿಕೊಂಡಿರುವ ಶಾಸಕರಾದ ವಿಶ್ವನಾಥ್, ಗೋಪಾಲಯ್ಯ, ಕೃಷ್ಣಪ್ಪ, ಮುನಿರಾಜು, ಮುನಿರತ್ನ, ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯನಾಯ್ಡು ಮೊದಲಾದವರು ಸಭೆಯಲ್ಲಿ ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ಶಾಸಕ ಮುನಿರತ್ನ, ದಕ್ಷಿಣ ಭಾರತದಲ್ಲಿ ಬಿಜೆಪಿ ಬೆಳಗಲು ಪ್ರಮುಖ ಕಾರಣಕರ್ತರಾದ ಬಿ.ಎಸ್. ಯಡಿಯೂರಪ್ಪನವರ ಕೊಡುಗೆ ಅಪಾರ. ಪಕ್ಷ ಕಟ್ಟಲು ಅವರು ಸತತ 50 ವರ್ಷ ಕಾಲ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಇವರು ಅಧಿಕಾರ ಅನುಭವಿಸಿದ್ದಕ್ಕಿಂತಾ ಜನರ ಪರವಾಗಿ ಹೋರಾಟ ಮಾಡಿದ್ದೇ ಹೆಚ್ಚು. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ಜನರಿಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದರು. ಜನನಾಯಕರಾಗಿ ಜನರ ಹೃದಯದಲ್ಲಿರುವ ಹೋರಾಟಗಾರ ಯಡಿಯೂರಪ್ಪನವರ ಸೇವೆ ಸ್ಮರಿಸಿ ಅವರನ್ನು ಗೌರವಿಸಲು ಅಭಿಮಾನೋತ್ಸವ ಏರ್ಪಡಿಸಲಾಗಿದೆ. ಎಲ್ಲಾ ಜಿಲ್ಲೆಗಳಿಂದಲೂ ಹೆಚ್ಚು ಜನ ಭಾಗವಹಿಸಿ ಹಿರಿಯ ನಾಯಕರಿಗೆ ಗೌರವ ಸಲ್ಲಿಸಬೇಕು ಎಂದು ಹೇಳಿದರು.



ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಅಭಿಮಾನೋತ್ಸವ ಸಮಾರಂಭದ ಹಿನ್ನೆಲೆಯಲ್ಲಿ ನಡೆದ ಸಭೆಯಲ್ಲಿ ಮುಖಂಡರನ್ನು ಸನ್ಮಾನಿಸಲಾಯಿತು.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ವಿಶ್ವ ನಾಯಕ. ಸುಭದ್ರ, ಸಮೃದ್ಧ ಭಾರತ ನಿರ್ಮಾಣದ ದೂರದೃಷ್ಟಿ ನಾಯಕರಾಗಿ ಉತ್ತಮ ಆಡಳಿತ ನೀಡುತ್ತಿದ್ದಾರೆ. ಮೊನ್ನೆ ನಡೆದ ಚುನಾವಣೆಯಲ್ಲಿ ಬಿಜೆಪಿ ಮೂರು ರಾಜ್ಯಗಳಲ್ಲಿ ಬಹುಮತ ಪಡೆದಿದೆ. ದೇಶದ ಬಹುಭಾಗದ ರಾಜ್ಯಗಳಲ್ಲಿ ಬಿಜೆಪಿ ಆಡಳಿತವಿದೆ ಎಂದರು.

ಯಲಹಂಕ ಶಾಸಕ ವಿಶ್ವನಾಥ್ ಮಾತನಾಡಿ, ಈ ನಾಡು ಕಂಡ ರೈತನಾಯಕ, ಬಡವರ ಬಂಧು ದೀನ ದಲಿತರ ಕಣ್ಮಣಿ ಭಾರತೀಯ ಜನತಾಪಕ್ಷ ಕರ್ನಾಟಕದಲ್ಲಿ ಕಟ್ಟಿ ಬೆಳೆಸಿದ ಮಾಜಿ ಮುಖ್ಯಮಂತ್ರಿಗಳು 50 ವರ್ಷದ ಸಾರ್ಥಕ ಬದುಕನ್ನು ಸವಿಸಿ ಲಕ್ಷಾಂತರ ಕಾರ್ಯಕರ್ತರನ್ನು ಬೆಳೆಸಿ, ಕರ್ನಾಟಕದ ರಾಜಕಾರಣದ ಧೃವತಾರೆಯಾಗಿ ನಿಂತಿದ್ದಾರೆ. ಅವರಿಗೆ ಪಕ್ಷಾತೀತವಾಗಿ ಅಭಿನಂದನಾ ಮಹೋತ್ಸವ ಚಿತ್ರದುರ್ಗ ದಲ್ಲಿ ಹಮ್ಮಿ ಕೊಂಡಿದ್ದೇವೆ ತಾವೆಲ್ಲರೂ ಕಾರ್ಯಕ್ರಮ ಕ್ಕೆ ಆಗಮಿಸಬೇಕೆಂದು ಕರೆ ಕೊಟ್ಟರು.

ಕಾರ್ಯಕ್ರಮ ಆಯೋಜನೆ ಮಾಡಿದ್ದ ತುಮಕೂರಿನ 32 ನೇ ವಾರ್ಡ್ ಬಿಜೆಪಿ ಮುಖಂಡರಾದ ಮರಿಬಸಪ್ಪ ಹಾಗೂ ಪ್ರೇಮ್ ಕುಮಾರ್ ಅವರು ಈ ವೇಳೆ ಬಿಜೆಪಿ ನಾಯಕರನ್ನು ಸನ್ಮಾನಿಸಿದರು.

ನಿಗದಿತ ಸಮಯದೊಳಗೆ ಕಾಮಗಾರಿ ಮುಗಿಸಿ

ಸಂಬಂಧಿಸಿದ ಇಲಾಖೆ ತಾಲೂಕು ಮಟ್ಟದ ಅಧಿಕಾರಿಗಳಿಗೆ ಶಾಸಕ ಕೆ.ಎನ್.ರಾಜಣ್ಣ ತಾಕೀತು

• **ಕನ್ನಡಪ್ರಭವಾರ್ತೆ** ಮಧುಗಿರಿ

ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ನಿಗದಿತ ಅವಧಿ ಒಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಶಾಸಕ ಕೆ.ಎನ್.ರಾಜಣ್ಣ ತಾಕೀತು ಮಾಡಿದರು.

ಬುಧವಾರ ಇಲ್ಲಿನ ತಹಸೀಲ್ದಾರ್‌ಕಚೇರಿಯಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಮಹತ್ವದ ಸಭೆಯನ್ನುದ್ದೇಶಿಸಿ ಮಾತನಾಡಿದರು.

ನಗರ ಸೇರಿದಂತೆ ಕ್ಷೇತ್ರದಲ್ಲಿ ಪ್ರಗತಿಯಲ್ಲಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕುರಿತು ಸಮಗ್ರವಾಗಿ ಮಾಹಿತಿ ಪಡೆದುಕೊಳ್ಳಲಾಯಿತು. ವಿಶೇಷವಾಗಿ ವಿವಿಧ ಯೋಜನೆಯಡಿ ನಗರದಲ್ಲಿ ನಡೆಯುತ್ತಿರುವ ದ್ವಿಪಥ ರಸ್ತೆ, ಚರಂಡಿ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗಳು ಉತ್ತಮ ಗುಣಮಟ್ಟದಲ್ಲಿ, ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಇದೇ ವೇಳೆ ಸಾರ್ವಜನಿಕರಿಂದ ಬಂದ ಅಹವಾಲುಗಳನ್ನು ಸ್ವೀಕರಿಸಿ, ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ತಕ್ಷಣ ಪರಿಹಾರ ಕಲ್ಪಿಸಲಾಯಿತು. ಇದರಿಂದ ಸಾರ್ವಜನಿಕರು ಶಾಸಕರ ಕಾರ್ಯ ವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಧಿಕಾರಿಗಳು ಶ್ರೀಸಾಮಾನ್ಯರ ಅಹೋತ್ತರಗಳಿಗೆ ಸ್ಪಂದಿಸಿ ಕೆಲಸ ಮಾಡಬೇಕು. ಕಚೇರಿಗಳಿಗೆ ಅರ್ಜಿ ಹೊತ್ತು ಜನರು ಅಲೆಯಬಾರದು ಆ ನಿಟ್ಟಿನಲ್ಲಿ ಕೆಲಸ ಮಾಡಿ ಮುಂಬರುವ ದಿನಗಳಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ಕ್ಷೇತ್ರದ ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಸೂಚಿಸಿದರು.



ತಹಸೀಲ್ದಾರ್‌ಕಚೇರಿಯಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಮಹತ್ವದ ಸಭೆಯಲ್ಲಿ ಶಾಸಕ ರಾಜಣ್ಣ ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಪಟ್ಟಣಕ್ಕೆ ಹೊಂದಿಕೊಂಡಿರುವ ಲಾಲಾಪೇಟೆ ಸಮೀಪದಲ್ಲಿ ವಿವಿಧ ಸಮುದಾಯಗಳ ವಿದ್ಯಾರ್ಥಿ ನಿಲಯ, ಸಮುದಾಯ ಭವನ ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅಗತ್ಯವಾದ ಸ್ಥಳ ಪರಿಶೀಲನೆ ನಡೆಸಲಾಯಿತು. ಈ ವೇಳೆ ಸಂಬಂಧಿಸಿದ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲಾಯಿತು.

ಸಭೆಯಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಎ.ಡಿ ಧನಂಜಯ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಪಿಡಬ್ಲ್ಯುಡಿ ಇಇ ಹನುಮಂತರಾವ್, ಎಇಇ ಸಂಪತ್ ಕುಮಾರ್, ಸಿಪಿಐ ಹನುಮಂತರಾಯಪ್ಪ, ಡಿವೈಎಸ್‌ಪಿ ಮಂಜುನಾಥ್ ಇತರರಿದ್ದರು.

ಯಂಜಲಗೆರೆ ಸೊಸೈಟಿ ಅಧ್ಯಕ್ಷರಾಗಿ ಕೆ.ಬಿ.ರಾಜಣ್ಣ ಅವಿರೋಧ ಆಯ್ಕೆ



• **ಕನ್ನಡಪ್ರಭ ವಾರ್ತೆ** ಶಿರಾ

ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವ ರೀತಿ ಸಾಲ ಸೌಲಭ್ಯ ಹಾಗೂ ರಸಗೊಬ್ಬರ ಕೊಡಿಸುವಂತಹ ಪ್ರಾಮಾಣಿಕ ಪ್ರಯತ್ನ ಮತ್ತು ಸೇವೆ ಮಾಡುವ ಸಂಕಲ್ಪ ನನ್ನದು ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷ ಕೆ.ಬಿ.ರಾಜಣ್ಣ ಹೇಳಿದರು.

ಅವರು ಶಿರಾ ತಾಲೂಕಿನ ಯಂಜಲಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಬಿ.ರಾಜಣ್ಣ, ಉಪಾಧ್ಯಕ್ಷರಾಗಿ ಹನುಮಂತರಾಯಪ್ಪ ಅವಿರೋಧವಾಗಿ ಆಯ್ಕೆಯಾದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದರು. ಎಲ್ಲರೂ ಒಗ್ಗೂಡಿ ಸಂಘವನ್ನು ಮುನ್ನಡೆಸಿದಾಗ ಆರ್ಥಿಕ ಪ್ರಗತಿ ಸಾಧಿಸಲು ಸಾಧ್ಯ ಎಂದರು.

ಈ ಸಂದರ್ಭದಲಿ ವೈ.ಕೆ. ತಿಪ್ಪೇಸ್ವಾಮಿ ನಿರ್ದೇಶಕರಾದ ಅಂಬಿಕಾ, ನರಸಿಂಹಯ್ಯ, ಶಿವಲಿಂಗಪ್ಪ, ಕೆ. ತಿಪ್ಪೇಸ್ವಾಮಿ, ಸುರೇಶ್ ಕಾರ್ತಿಕ, ಎಂ.ಸಿದ್ದೇಶ್ವರ, ಓಬಣ್ಣ, ರಾಮಣ್ಣ, ಸುವರ್ಣಮ್ಮ, ಸಚಿನ್, ಹಟ್ಟಿ ಚಿನ್ನದ ಗಣಿ ಮಾಜಿ ನಿರ್ದೇಶಕ ಕೊಟ್ಟಿ ಆಶೋಕ್, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ವಸುಧ ತಿಪ್ಪೇಶ್ ಗೌಡ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ದೊಡ್ಡೇಗೌಡ, ಮಂಜುನಾಥ್, ಗ್ರಾಪಂ ಮಾಜಿ ಸದಸ್ಯ ಈರಣ್ಣ, ಮುಖಂಡರಾದ ಶಿವಣ್ಣ, ನರಸಿಂಹಮೂರ್ತಿ, ಶಾಂತರಾಜು, ಮೇಲ್ವಿಚಾರಕ ಎನ್. ಸಿ. ವಿಠಲ್, ಕಾರ್ಯದರ್ಶಿ ಹೆಚ್. ನಾಗರಾಜು ಸೇರಿದಂತೆ ಹಲವಾರು ಮುಖಂಡರು ಇದ್ದರು, ಚುನಾವಣಾ

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಶಿವಶಂಕರ್ ನಿಧನ



ತಿಪಟೂರು: ಶಿಕ್ಷಣ ಇಲಾಖೆ ತಾಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಶಿವಶಂಕರ್ ಡಿ.ಎಸ್. (55) ಹೃದಯಘಾತದಿಂದ ಬುಧವಾರ ನಿಧನರಾಗಿದ್ದಾರೆ. ಇವರಿಗೆ ಪತ್ನಿ ನಾಗರತ್ನಮ್ಮ , ಇಬ್ಬರು ಪುತ್ರರಾದ ಹರ್ಷ ಮತ್ತು ಚಿರಾಗ್ ಇದ್ದಾರೆ. ಇತ್ತೀಚೆಗೆ ಹೃದಯದ ತೊಂದರೆ ಕಾಣಿಸಿಕೊಂಡಿದ್ದು ಬುಧವಾರ ಹೃದಯ ಶಸ್ತ್ರಚಿಕಿತ್ಸೆ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಡೆಯುವ ವೇಳೆ ಶಿವಶಂಕರ್ ಹಠಾತ್ ನಿಧನರಾಗಿದ್ದಾರೆ. ಅಂತ್ಯ ಸಂಸ್ಕಾರ ಸ್ವಂತ ಗ್ರಾಮವಾದ ಚಿ.ನಾ. ಹಳ್ಳಿ ತಾಲೂಕು ದುಗುಡಿಹಳ್ಳಿಯಲ್ಲಿ ಗುರುವಾರ ಮಧ್ಯಾಹ್ನ 12ಗಂಟೆ ವೇಳೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ಸಾವಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ತಾರಾಮಣಿ, ಶಿಕ್ಷಕವೃಂದ, ಅಧಿಕಾರಿಗಳು ಸೇರಿದಂತೆ ಅಪಾರ ಸಂಖ್ಯೆಯ ನೌಕರರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಜಮೀನಿನ ವಿವಾದ: ಮಾರಾಮಾರಿ

ತುಮಕೂರು: ಜಮೀನು ವಿವಾದದ ಹಿನ್ನೆಲೆ ಎರಡು ಕುಟುಂಬಗಳ ನಡುವೆ ಮಾರಾಮಾರಿ ನಡೆದ ಘಟನೆ ತಾಲೂಕಿನ ಪಾಲಸಂದ್ರ ಗ್ರಾಮದಲ್ಲಿ ನಡೆದಿದೆ.

ಸಿದ್ದರಾಜು ಮತ್ತು ಮಂಜುನಾಥ ಕುಟುಂಬದ ನಡುವೆ ಜಮೀನು ವ್ಯಾಜ್ಯ ಹಿನ್ನೆಲೆ ಗುದ್ದಲಿ , ಪಿಕಾಸಿನಿಂದ ಪರಸ್ಪರ ಹೊಡೆದಾಟ ಮಾಡಿಕೊಂಡಿದ್ದು, ಪಾಲಸಂದ್ರದ 8 ಎಕರೆ ಜಮೀನಿನಲ್ಲಿ 4 ಎಕರೆ ತನಗೆ ಸೇರಿದ್ದು ಎಂದು ಮಂಜುನಾಥ ತಗಾದೆ ತೆಗೆದಿದ್ದಾರೆ. ಸದ್ಯ ಸಿದ್ದರಾಜು ಕುಟುಂಬ ಪೂರ್ಣ 8 ಎಕರೆಯನ್ನು ಈಗಾಗಲೇ ಅನುಭವಿಸುತ್ತಿದ್ದಾರೆ. ಮಾವು ಕೀಳಲು ಮಂಜುನಾಥ ಬಂದಿದ್ದ ವೇಳೆ ಎರಡೂ ಕುಟುಂಬಗಳ ನಡುವೆ ಮಾರಾಮಾರಿ ನಡೆದಿದೆ. ಘಟನೆಯಲ್ಲಿ ಸಿದ್ದರಾಜು ಪತ್ನಿ ವಸಂತಕುಮಾರಿಗೆ ಗಾಯಗಳಾಗಿವೆ.

ಸಿ.ಆರ್.ಯಶೋದಮ್ಮ ನಿಧನ



ತುಮಕೂರು: ಡಿಸಿ.ಸಿ. ಬ್ಯಾಂಕಿನ ನಿವೃತ್ತ ನೌಕರರಾದ ಬಿ.ದೊಡ್ಡಯ್ಯ ನವರ ಪತ್ನಿ ಯಶೋದಮ್ಮ ಸಿ.ಆರ್ ಅವರು ಬುಧವಾ ರ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಕೆಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರಿಗೆ ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಇದ್ದಾರೆ.



ಗಡಿಭಾಗದಲ್ಲಿ ಕನ್ನಡಕ್ಕೆ ಪ್ರೋತ್ಸಾಹ ಅಗತ್ಯ: ಕಟ್ಟಾ ನರಸಿಂಹಮೂರ್ತಿ



ಪಾವಗಡ ತಾಲೂಕು ಕಸಾಪ ವತಿಯಿಂದ ಪಟ್ಟಣದ ಗುರುಭವನದಲ್ಲಿ ಹಮ್ಮಿಕೊಂಡಿದ್ದ ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಟ್ಟಾನರಸಿಂಹಮೂರ್ತಿ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಪಾವಗಡ

ಅನ್ಯ ಭಾಷ ಪ್ರಭಾವವಿರುವ ಗಡಿ ಭಾಗದಲ್ಲಿ ಕನ್ನಡ ಕಾರ್ಯಕ್ರಮಗಳಿಗೆ ಹೆಚ್ಚು ಪ್ರೋತ್ಸಾಹ ದೊರೆಯಬೇಕಾಗಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿತ್ತಿನ ಅಧ್ಯಕ್ಷ ಕಟ್ಟಾನರಸಿಂಹಮೂರ್ತಿ ಹೇಳಿದರು.

ತಾಲೂಕು ಕಸಾಪ ವತಿಯಿಂದ ಮಂಗಳವಾರ ಪಟ್ಟಣದ ಗುರುಭವನದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ರಾಜ್ಯಾದ್ಯಂತ 5 ರಂದು ಅತ್ಯಂತ ಸಂಭ್ರಮದಿಂದ ಕಸಾಪ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾತ್ತಿದೆ. 1915 ರಲ್ಲಿ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್‌ಮತ್ತು ಸರ್‌ಎಂ.ವಿಶ್ವೇಶ್ವರಯ್ಯ ಒತ್ತಾಸೆಯಂತೆ ಕನ್ನಡ ಉಳಿವು ಮತ್ತು ಅಭಿವೃದ್ಧಿಗಾಗಿ ಆರಂಭಗೊಂಡ ಸಂಸ್ಥೆ ಇಂದು ಬೃಹದಾಕಾರವಾಗಿ ಬೆಳೆದು ನಗರ ಪಟ್ಟಣ ಎನ್ನದೆ ತಾಲೂಕು ಹೋಬಳಿ ಹಳ್ಳಿಯ ಮೂಲೆ ಮೂಲೆಗೂ ಕನ್ನಡದ ಘನತೆಯನ್ನು ಪಸರಿಸುತ್ತಿದೆ. ಈಕಾರ್ಯದಲ್ಲಿತೊಡಗಿಸಿಕೊಂಡು ಸಂಸ್ಥೆಯನ್ನು ಮುನ್ನಡೆಸಿದ ಪ್ರತಿಯೊಬ್ಬರನ್ನೂ ಇಂದು ನಾವು ನೆನೆಯಬೇಕಾಗಿದೆ. ಅವರೆಲ್ಲಾ ಈ ಸಂಸ್ಥೆಯ ಮೂಲಕ ಕನ್ನಡ ನಾಡು-ನುಡಿಯ ಸೇವೆಗಾಗಿ ಸಮರ್ಪಿಸಿಕೊಂಡಿದ್ದಾರೆ ಎಂದರು.

ಕಸಾಪ ಕೋಶಾಧ್ಯಕ್ಷ ಕೆ.ಎಂ.ಪ್ರಭಾಕರ್ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಕಳೆದ ಒಂದು ಶತಮಾನಕ್ಕೂ ಹೆಚ್ಚು ಕಾಲ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸುತ್ತಿರುವ ಪ್ರಮುಖ ಸ್ವಾಯತ್ತ ಸಂಸ್ಥೆಯಾಗಿದೆ. ಇದರ ಸದಸ್ಯರಾಗಿರುವುದಕ್ಕೆ ನಮಗೆ ಹೆಮ್ಮೆ ಎನಿಸುತ್ತಿದೆ ಎಂದರು.

ಇದೇ ವೇಳೆ ಕಸಾಪ ತಾಲೂಕು ಘಟಕದ ಕಾರ್ಯದರ್ಶಿ ಐ.ಎ.ನಾರಾಯಣಪ್ಪ, ನಿರ್ದೇಶಕ ಪ್ರಮೋದ್, ವೈ.ಎನ್.ಹೊಸಕೋಟೆ ಹೋಬಳಿ ಘಟಕದ ಅಧ್ಯಕ್ಷ ಹೊ.ಮ.ನಾಗರಾಜು ಇತರೆ ಅನೇಕ ಮಂದಿ ಕಸಾಪ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಕ್ರಮ ಗೋ ಸಾಗಣೆ: ಇಬ್ಬರ ಬಂಧನ

ಕನಕಪುರ: ಅಕ್ರಮವಾಗಿ ಗೋವುಗಳ ಸಾಗಿಸುತ್ತಿದ್ದ ಆರೋಪಿಗಳನ್ನು ಬಜರಂಗದಳದ ಕಾರ್ಯಕರ್ತರು ಹಿಡಿದು ಪೋಲಿಸರಿಗೆ ಒಪ್ಪಿಸಿರುವ ಘಟನೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಖಚಿತ ಮಾಹಿತಿ ಮೇರೆಗೆ ಬುಧವಾರ ಬೆಳಗಿನ ಜಾವ ಕಸಬಾ ಹೋಬಳಿಯ ತೊಪ್ಪಗನಹಳ್ಳಿ ಬಳಿ ಹೋಗುತ್ತಿದ್ದ ಐಷರ್‌ಕ್ಯಾಂಟರ್ ವಾಹನವನ್ನು ಬಜರಂಗದಳದ ಕಿರಣ್, ಶ್ರೀನಿಧಿ, ಪ್ರತಾಪ್, ಸಂತೋಷ್ ಅಡ್ಡಗಟ್ಟಿ ವಾಹನ ಪರೀಶೀಲನೆ ನಡೆಸಿದ ವೇಳೆ 37 ಎಮ್ಮೆ ಹಾಗೂ 2 ಕರು ಪತ್ತೆಯಾಗಿದೆ. ಗೋವುಗಳನ್ನು ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿರುವುದಾಗಿ ಕ್ಯಾಂಟರ್ ಚಾಲಕ ತಿಳಿಸಿದ್ದು, ಚಾಲಕ ಹಾಗೂ ಮತ್ತೊಬ್ಬಸೇರಿ ಇಬ್ಬರನ್ನು ಗ್ರಾಮಾಂತರ ಪೊಲೀಸ್ ಠಾಣೆಗೆ ಕರೆದೊಯ್ದು ದೂರು ದಾಖಲಿಸಿಕೊಂಡು ಆರೋಪಿಗಳು ಹಾಗೂ ವಾಹನವನ್ನು ಪೊಲೀಸರ ವಶಕ್ಕೆ ನೀಡಿ ಗೋವುಗಳನ್ನು ಮೈಸೂರು ರಸ್ತೆಯ ಬಿಜಿಎಸ್ ಸಂಸ್ಥೆಯ ಗೋಶಾಲೆಗೆ ಬಿಡಲಾಗಿದೆ. ಕೆ.ಆರ್.ಪೇಟೆಯ ಬಲರಾಮ್, ಮೈಸೂರಿನ ಶಾಂತಿನಗರದಸೈಯದ್ ಸಾಹಿಬ್ ಉಲ್ಲಾನನ್ನು ವಶಕ್ಕೆ ಪಡೆದು ಕನಕಪುರ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಒಪ್ಪಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

